"ಮಧುರ ಮಕ್ಕಳೇ - ಜ್ಞಾನ ಸಾಗರ ತಂದೆ ನಿಮಗೆ ಜ್ಞಾನ ನೀಡಿ ಸ್ವದರ್ಶನ ಚಕ್ರಧಾರಿ, ತ್ರಿಕಾಲದರ್ಶಿಗಳನ್ನಾಗಿ ಮಾಡಿದ್ದಾರೆ, ನೀವೀಗ ಬ್ರಹ್ಮಾವಂಶಿ ಬ್ರಾಹ್ಮಣರಾಗಿದ್ದೇವೆಂಬ ನಶೆಯಲ್ಲಿ ಸದಾ ಇರಬೇಕು"

ಪ್ರಶ್ನೆ: ಬ್ರಾಹ್ಮಣರಾದ ತಕ್ಷಣ ನೀವು ಮಕ್ಕಳು ಪದಮಾಪದಮ ಭಾಗ್ಯಶಾಲಿಗಳಾಗಿ ಬಿಡುತ್ತೀರಿ - ಹೇಗೆ?

ಉತ್ತರ: ಬ್ರಾಹ್ಮಣರಾಗುವುದೆಂದರೆ ಒಂದು ಸೆಕೆಂಡಿನಲ್ಲಿ ಜೀವನ್ಮುಕ್ತಿ ಪ್ರಾಪ್ತಿ ಮಾಡಿಕೊಳ್ಳುವುದಾಗಿದೆ. ತಂದೆಗೆ ಮಕ್ಕಳಾಗುವುದೆಂದರೆ ತಂದೆಯ ಆಸ್ತಿಯ ಅಧಿಕಾರ ಪ್ರಾಪ್ತಿಯಾಯಿತೆಂದರ್ಥ. ಹೀಗೆ ಜೀವನ್ಮುಕ್ತಿ ನಿಮ್ಮ ಹಕ್ಕಾಗಿದೆ, ಆದುದರಿಂದ ನೀವು ಪದಮಾಪದಮ ಭಾಗ್ಯಶಾಲಿಗಳಾಗಿದ್ದೀರಿ. ಈ ಮೃತ್ಯುಲೋಕದಲ್ಲಿ ಯಾರೂ ಸೌಭಾಗ್ಯಶಾಲಿಗಳಿಲ್ಲ. ಅಕಾಲಮೃತ್ಯು ಆಗುತ್ತಿರುತ್ತದೆ. ನೀವೀಗ ಮೃತ್ಯುವಿನ ಮೇಲೆ ವಿಜಯಿಗಳಾಗುತ್ತೀರಿ. ನಿಮಗೆ ತ್ರಿಕಾಲದರ್ಶಿತನದ ಜ್ಞಾನವಿದೆ. ಶಿವ ತಂದೆಯು 21 ಜನ್ಮಗಳಿಗೆ ನಿಮ್ಮ ಜೋಳಿಗೆಯನ್ನು ತುಂಬುತ್ತಿದ್ದಾರೆ.

ಓಂ ಶಾಂತಿ. ನಾವು ಮುಳ್ಳುಗಳಿಂದ ಹೂಗಳಾಗುತ್ತಿದ್ದೇವೆ ಅರ್ಥಾತ್ ಮನುಷ್ಯರಿಂದ ದೇವತೆಗಳಾಗುತ್ತಿದ್ದೇವೆ ಮತ್ತು ಇದು ಮುಳ್ಳುಗಳ ತೋಟವಾಗಿದೆ ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಈಗ ಪುನಃ ಹೂತೋಟದಲ್ಲಿ ಹೋಗಬೇಕಾಗಿದೆ. ಈ ದೆಹಲಿಯೂ ಸಹ ಒಮ್ಮೆ ಸ್ವರ್ಗವಾಗಿತ್ತು. ಆಗ ನೀವು ಮಕ್ಕಳು ದೇವತೆಗಳಾಗಿದ್ದು ರಾಜ್ಯಭಾರ ಮಾಡುತ್ತಾ ಕೆಲವರುರಾಜ, ಮಹಾರಾಜನ ರೂಪದಲ್ಲಿ, ಕೆಲವರು ಪ್ರಜೆರೂಪದಲ್ಲಿ ರಾಜ್ಯಭಾರ ಮಾಡುತ್ತಿದ್ದಿರಿ. ಈಗ ಈ ಸೃಷ್ಟಿ ಸ್ಮಶಾನ ಆಗುವುದಿದೆ ಎಂದು ಎಲ್ಲರೂ ತಿಳಿದುಕೊಂಡಿದ್ದೀರಿ. ಇದೇ ಪ್ರಪಂಚವನ್ನು ನೀವು ಫರಿಸ್ಥಾನವನ್ನಾಗಿ ಮಾಡಬೇಕಾಗಿದೆ. ಆಗ ಪ್ರಪಂಚವೆಲ್ಲಾ ಹೊಸದಾಗಿ ಬಿಡುತ್ತದೆಯೆಂದು ನೀವು ತಿಳಿದುಕೊಂಡಿದ್ದೀರಿ. ಯಮುನಾ ತೀರದಲ್ಲಿ ರಾಧಾ-ಕೃಷ್ಣ, ಲಕ್ಷ್ಮೀ-ನಾರಾಯಣರಿದ್ದರು, ಕೇವಲ ರಾಧಾ-ಕೃಷ್ಣರಷ್ಟೆ ರಾಜ್ಯ ಮಾಡುತ್ತಿರಲಿಲ್ಲ. ರಾಧೆ ಹಾಗೂ ಕೃಷ್ಣ ಬೇರೆ ಬೇರೆ ರಾಜಧಾನಿಯವರಾಗಿದ್ದರು. ನಂತರ ಇಬ್ಬರಿಗೂ ಸ್ವಯಂವರವಾದ ನಂತರ ಯಮುನಾ ದಡದಲ್ಲಿ ರಾಜ್ಯ ಮಾಡುತ್ತಾರೆ. ರಾಧಾ-ಕೃಷ್ಣರಿಗೆ ಸ್ವಯಂವರ ನಂತರ ಲಕ್ಷ್ಮೀ-ನಾರಾಯಣರೆಂದು ಕರೆಯಬೇಕಾಗಿತ್ತು ಆದರೆ ಮರೆತು ರಾಧಾ-ಕೃಷ್ಣರೆಂದೇ ಕರೆದು ಬಿಟ್ಟಿದ್ದಾರೆ. ಸ್ವಯಂವರ ನಂತರ ಲಕ್ಷ್ಮೀ-ನಾರಾಯಣರಾಗಿ ಸ್ವರ್ಗದಲ್ಲಿ ಇರುತ್ತಾರೆ. ಈ ಲಕ್ಷ್ಮೀ-ನಾರಾಯಣರ ಸಿಂಹಾಸನ ಬಹಳ ಹಳೆಯದಾಗಿದೆ. ಆದಿ ಸನಾತನ ದೇವೀ-ದೇವತೆಗಳ ಸಿಂಹಾಸನದ ಹೆಸರಿನಲ್ಲಿ ನಡೆದು ಬರುತ್ತದೆ. ಆದರೆ ಈ ಮಾತುಗಳನ್ನು ಕೇವಲ ನೀವು ಮಕ್ಕಳು ಮಾತ್ರ ತಿಳಿದುಕೊಂಡಿದ್ದೀರಿ. ನೀವು ತಮ್ಮ ಸ್ವರ್ಗವನ್ನು ಮಾಡುತ್ತಿದ್ದೀರಿ. ರಾಜಧಾನಿ ಸ್ಥಾಪನೆಯಾಗುತ್ತಿದೆ. ಹೇಗೆ? ಯೋಗಬಲದಿಂದ ಸ್ಥಾಪನೆ ಆಗುತ್ತದೆ. ದೇವೀ-ದೇವತೆಗಳ ರಾಜಧಾನಿ ಯುದ್ಧದಿಂದ ಸ್ಥಾಪನೆ ಆಗುವುದಿಲ್ಲ. ನೀವಿಲ್ಲಿ ಐದು ಸಾವಿರ ವರ್ಷದ ಹಿಂದೆ ಕಲಿತಂತಹ ರಾಜಯೋಗವನ್ನು ಕಲಿಯಲು ಬಂದಿರುವಿರಿ ಎಂದು ತಂದೆ ತಿಳಿಸುತ್ತಾರೆ. ಹಾ! ಬಾಬಾ ಕಲ್ಪದ ಹಿಂದೆಯೂ ಸಹ ಇಂದಿನ ದಿನವಾದ ಈ ಸಮಯದಲ್ಲಿ ತಂದೆಯಿಂದ ಓದುವುದನ್ನು ಕಲಿತಿದ್ದೆವೆಂದು ನೀವು ಹೇಳುತ್ತೀರಿ. ಇಲ್ಲಿಗೆ ಮಹಾತ್ಮ ಸಾಧು ಸಂತರು ಯಾರೂ ಬರಲು ಸಾಧ್ಯವಿಲ್ಲ. ತಂದೆಯ ಬಳಿಗೆ ಮಕ್ಕಳೇ ಬರುತ್ತಿದ್ದಾರೆ. ಮಕ್ಕಳ ವಿನಃ ತಂದೆ ಯಾರೊಂದಿಗೂ ಮಾತನಾಡುವುದಿಲ್ಲ. ತಂದೆಯು ಸಹ ನಾನು ಮಕ್ಕಳಿಗೆ ಕಲಿಸಿಕೊಡುತ್ತೇನೆಂದು ತಿಳಿಸುತ್ತಾರೆ. ಆದುದರಿಂದ ನಿಮಗೆ ತುಂಬಾ ನಶೆ ಇರಬೇಕು. ಜ್ಞಾನ ಸಾಗರನು ತಂದೆ ಆಗಿದ್ದು ಅವರಿಗೆ ಜ್ಞಾನ ಜ್ಞಾನೇಶ್ವರ ಎಂದು ಕರೆಯುತ್ತಾರೆ, ಈಶ್ವರ ಜ್ಞಾನ ಸಾಗರ ಈ ಸಮಯದಲ್ಲಿ ನಿಮಗೆ ಜ್ಞಾನ ಕೊಡುತ್ತಿದ್ದಾರೆಂದು ಇದರ ಅರ್ಥವಾಗಿದೆ. ಯಾವ ಜ್ಞಾನ ಕೊಡುತ್ತಾರೆ? ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನವನ್ನು ಕೊಡುವರು. ನೀವು ಮಕ್ಕಳು ಬ್ರಹ್ಮಾವಂಶಿ ಸ್ವದರ್ಶನ ಚಕ್ರಧಾರಿಗಳಾಗಿದ್ದೀರಿ. ರಾಜ್ಯ ಮಾಡುವಂತಹ ವಿಷ್ಣುವಂಶದವರು ಸ್ವದರ್ಶನ ಚಕ್ರಧಾರಿ ಹಾಗೂ ತ್ರಿಕಾಲದರ್ಶಿಗಳಲ್ಲ. ನೀವೀಗ ಬ್ರಹ್ಮಾವಂಶಿಗಳಿಂದ ದೇವತೆಗಳಾಗುತ್ತೀರಿ. ನಾವೇ ಸೂರ್ಯ ವಂಶದವರಾಗಿದ್ದು, ಪುನಃ ಚಂದ್ರ ವಂಶದಲ್ಲಿ ಬರುತ್ತಾ ವೈಶ್ಯ ವಂಶ ಅಂತ್ಯದಲ್ಲಿ ಶೂದ್ರವಂಶದವರಾಗಿದ್ದೇವೆ. ಈಗ ಪುನಃ ನಾವು ಬ್ರಾಹ್ಮಣ ವಂಶದವರಾಗಿದ್ದೇವೆ. ನೀವೀಗ ತಮ್ಮನ್ನು ಸ್ವದರ್ಶನ ಚಕ್ರಧಾರಿಗಳೆಂದು ತಿಳಿದುಕೊಂಡಿದ್ದೀರಿ. ಇಡೀ ವಿಶ್ವದ ಆದಿ-ಮಧ್ಯ-ಅಂತ್ಯದ ಜ್ಞಾನ ನಮ್ಮಲ್ಲಿದೆ. ಈ ಜ್ಞಾನದಿಂದ ಮತ್ತೆ ನಾವು ಚಕ್ರವರ್ತಿ ರಾಜಾ ರಾಣಿ ಆಗುತ್ತೇವೆ. ಈ ಜ್ಞಾನ ಸರ್ವ ಧರ್ಮದ ಸಲುವಾಗಿದೆ. ಈ ಬ್ರಹ್ಮನ ಸಹಿತ ಶಿವ ತಂದೆ ಎಲ್ಲರಿಗೂ ತಿಳಿಸುತ್ತಾರೆ-ಇವರ ಆತ್ಮವೂ ಸಹ ಈಗ ಕೇಳುತ್ತಿದೆ, ನೀವೀಗ ಬ್ರಾಹ್ಮಣರಾಗಿದ್ದೀರಿ. ಪ್ರತಿಯೊಬ್ಬ ಮನುಷ್ಯ ಮಾತ್ರರೆಲ್ಲರೂ ಶಿವ ತಂದೆ ಹಾಗೂ ಬ್ರಹ್ಮಾ ತಂದೆ ಇಬ್ಬರಿಗೂ ಮಕ್ಕಳಾಗಿದ್ದಾರೆ. ಈ ಬ್ರಹ್ಮಾ ತಂದೆಯು ಎಲ್ಲಾ ಮನುಷ್ಯರಿಗು ಸರ್ವ ಶ್ರೇಷ್ಠ ಪ್ರಪ್ರಥಮ ಮಹಾಪಿತನಾಗಿದ್ದು ಹಾಗೂ ಶಿವ ತಂದೆಯು ಸರ್ವರಿಗು ಆತ್ಮಿಕ ತಂದೆ ಆಗಿದ್ದಾರೆ. ಶಿವ ತಂದೆಗೆ ಪ್ರಜಾಪಿತನೆಂದು ಕರೆಯುವುದಿಲ್ಲ. ಶಿವ ತಂದೆ ಆತ್ಮಗಳ ತಂದೆಯಾಗಿದ್ದಾರೆ. ನಾನು ಭಾರತವಾಸಿಗಳಿಗೆ ರಾಜ್ಯಭಾರ ಕೊಟ್ಟು, ವಜ್ರ ಸಮಾನ ಸದಾ ಸುಖಿಯನ್ನಾಗಿ ಮಾಡಿ 21 ಜನ್ಮಗಳಿಗೆ ಆಸ್ತಿ ಕೊಡುತ್ತೇನೆಂದು ತಂದೆ ತಿಳಿಸುತ್ತಾರೆ. ಆ ಭಾರತವಾಸಿಗಳು ಪುನಃ ಪೂಜ್ಯರಿಂದ ಪೂಜಾರಿಗಳಾದಾಗ ನನ್ನ ನಿಂದನೆ ಮಾಡುತ್ತಾರೆ. ನಾನು ನಿಮ್ಮ ಶ್ರೇಷ್ಠ ತಂದೆ ಆಗಿದ್ದೇನೆ ನಾನೇ ಭಾರತವನ್ನು ಸ್ವರ್ಗ ವೈಕುಂಠವಾಗಿ ಮಾಡುತ್ತೇನೆ. ಆದರೆ ನೀವು ನನ್ನನ್ನು ಸರ್ವವ್ಯಾಪಿ ಎಂದು ಹೇಳಿ ನನ್ನ ನಿಂದನೆ ಮಾಡುತ್ತೀರೆಂದು ತಂದೆ

ತಿಳಿಸುತ್ತಾರೆ. ಇದು ನೆನ್ನೆಯ ಮಾತಾಗಿದೆ... 5000 ವರ್ಷದ ಹಿಂದೆ ಭಾರತ ಸ್ವರ್ಗವಾಗಿತ್ತು. ನೀವೇ ಅಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಅಪಾರವಾದ ಸುಖ (ಪ್ರಕಾಶ) ವಿತ್ತು, ಆದರೆ ಮನುಷ್ಯರು ಇಂದು ಅಂಧಕಾರದಲ್ಲಿದ್ದು ತಮ್ಮನ್ನು ಸ್ವರ್ಗದಲ್ಲಿದ್ದೇವೆಂದು ತಿಳಿಯುತ್ತಾರೆ. ಹೊಸ ಪ್ರಪಂಚದಲ್ಲಿ ಹೊಸ ಭಾರತ ರಾಮ ರಾಜ್ಯವಾಗಿರಲಿ ಎಂದು ಭಾರತವಾಸಿಗಳು ಹಾಡುತ್ತಾರೆ. ಆದರೆ ಈ ಸಮಯದ ಜಗತ್ತನ್ನು ಮನುಷ್ಯರು ಹೊಸ ಜಗತ್ತೆಂದು ತಿಳಿದುಕೊಳ್ಳುತ್ತಿದ್ದಾರೆ. ಇದೂ ಸಹ ನಾಟಕವಾಗಿದೆ. ಈ ಸಮಯದಲ್ಲಿ ಮಾಯೆಯ ಅಂತಿಮ ಆಡಂಬರವಾಗಿದೆ. ಈಗ ರಾವಣ ರಾಜ್ಯ ಮುರ್ದಾಬಾದ್ ಹಾಗೂ ರಾಮ ರಾಜ್ಯ ಜಿಂದಾಬಾದ್ ಆಗುತ್ತದೆ. ರಾಮ ರಾಜ್ಯವೆಂದರೆ ರಾಮ ಸೀತೆಯ ರಾಜ್ಯವೆಂದರ್ಥವಲ್ಲ. ಸೂರ್ಯವಂಶೀ ರಾಜ್ಯಕ್ಕೆ ರಾಮ ರಾಜ್ಯವೆಂದು ಕರೆಯಲಾಗುತ್ತದೆ. ನೀವು ಸೂರ್ಯವಂಶಿ ರಾಜ ರಾಣಿ ಆಗಲು ಬಂದಿದ್ದೀರಿ. ಏಕೆಂದರೆ ಇದು ರಾಜಯೋಗವಾಗಿದೆ. ಈ ಜ್ಞಾನವನ್ನು ಬ್ರಹ್ಮಾ ಅಥವಾ ಕೃಷ್ಣ ಯಾರೂ ಸಹ ಓದಿಸುತ್ತಿಲ್ಲ, ಸ್ವಯಂ ಪರಮಪಿತ ಪರಮಾತ್ಮನು ಮಾತ್ರ ಓದಿಸುತ್ತಾರೆ ಏಕೆಂದರೆ ಅವರೇ ಪತಿತ ಪಾವನ, ಇಡೀ ವಿಶ್ವವನ್ನು ಸ್ವರ್ಗ ಮಾಡಿ ಸುಖ ಶಾಂತಿಯನ್ನು ನೀಡುವವರಾಗಿದ್ದಾರೆ. ಈ ಭಾರತ ಮೊದಲು ಸುಖಧಾಮವಾಗಿತ್ತು ಆ ಸುಖಧಾಮಕ್ಕೆ ಎಲ್ಲರೂ ಶಾಂತಿಧಾಮದಿಂದ ಬರುತ್ತಾರೆ. ನಾನು ಆತ್ಮ ಮೊದಲು ಶಾಂತಿಧಾಮದಲ್ಲಿ ಇರುತ್ತೇನೆ. ಆತ್ಮವೇ ಪರಮಾತ್ಮನಲ್ಲ, ಆದರೆ ನಾನು ಆತ್ಮ ಸೂರ್ಯವಂಶಿ ಆಗಿದ್ದು ನಂತರಕ್ಷತ್ರಿಯ, ವೈಶ್ಯ, ಶೂದ್ರ ವಂಶದವನಾಗುತ್ತೇನೆ. ಈಗ ಪುನಃ ಬ್ರಾಹ್ಮಣ ವಂಶದಲ್ಲಿ ಬರುತ್ತೇವೆ. ಈ ಸೃಷ್ಟಿಚಕ್ರ ಅರ್ಥಾತ್ ಬಾಜೋಲಿ ಆಟವಾಗಿದೆ. ಮೊಟ್ಟ ಮೊದಲು ಬ್ರಾಹ್ಮಣ ಶಿಖೆ ನಂತರ ಕ್ಷತ್ರಿಯ ಒಟ್ಟು 84 ಜನ್ಮಗಳನ್ನು ಪಡೆಯಬೇಕಾಗುತ್ತದೆ. ಮಕ್ಕಳು ಇಲ್ಲಿ ಗೊಂದಲವಾಗುವ ಮಾತಿಲ್ಲ. ಒಂದು ಸೆಕೆಂಡಿನಲ್ಲಿ ಜೀವನ್ಮುಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ತಂದೆಯ ಮಗುವಾದರೆ ಆಸ್ತಿಗೆ ಯೋಗ್ಯರಾಗಿ ಬಿಡುತ್ತೇವೆ. ತಂದೆ-ತಾಯಿಯಿಂದ ಜನ್ಮ ಪಡೆದೆವೆಂದರೆ ಆಸ್ತಿ ಪ್ರಾಪ್ತಿ ಆಯಿತೆಂದರ್ಥ. ಇದು ಒಂದು ಸೆಕೆಂಡಿನ ಮಾತಾಗಿದೆ. ಜನಕನಿಗೂ ಒಂದು ಸೆಕೆಂಡಿನಲ್ಲಿ ಜೀವನ್ಮುಕ್ತಿ ಪ್ರಾಪ್ತಿಯಾಯಿತಲ್ಲವೆ. ಈಶ್ವರನ ಮಕ್ಕಳಾಗಿರುವ ಕಾರಣ ಜೀವನ್ಮುಕ್ತಿ ನಿಮ್ಮ ಹಕ್ಕಾಗಿದೆ. ಇದು ಮೃತ್ಯು ಲೋಕವಾಗಿದೆ, ನೀವು ಅಮರಲೋಕಕ್ಕೆ ಮಾಲೀಕರಾಗುತ್ತೀರಿ. ಸೌಭಾಗ್ಯಶಾಲಿಗಳು ಬೇರೆ ಯಾರೂ ಇಲ್ಲ. ಇಲ್ಲಿ ಅಕಾಲಮೃತ್ಯು ಆಗುತ್ತಿರುತ್ತದೆ. ನೀವೀಗ ಮೃತ್ಯುವಿನ ಮೇಲೆ ವಿಜಯಿಗಳಾಗುತ್ತಿದ್ದೀರಿ. ತಂದೆ ಕಾಲರ ಕಾಲ ಆಗಿದ್ದು ಆ ತಂದೆಯಿಂದ ನಿಮಗೆ ಅಪಾರವಾದ ಅಸ್ತಿ ಪ್ರಾಪ್ತಿಯಾಗುತ್ತದೆ. ಇದನ್ನು ಸನ್ಯಾಸಿಗಳು ತಿಳಿದುಕೊಂಡಿಲ್ಲ. ನೀವು ಎಲ್ಲಾ ಧರ್ಮಗಳನ್ನು ತಿಳಿದುಕೊಳ್ಳುವ ಸಲುವಾಗಿ ಈ ಚಿತ್ರಗಳು ಮಾಡಲ್ಪಟ್ಟಿದೆ. ಇದು ಪಾಠಶಾಲೆಯಾಗಿದೆ. ಈ ಪಾಠಶಾಲೆಯಲ್ಲಿ ಯಾರು ಓದಿಸುತ್ತಿದ್ದಾರೆ? ಭಗವಾನುವಾಚ, ಅಂದರೆ ಕೃಷ್ಣ ಓದಿಸುವುದಿಲ್ಲ. ಜ್ಞಾನ ಸಾಗರ ಕೃಷ್ಣನಲ್ಲ. ಜ್ಞಾನ ಸಾಗರ ಪರಮಪಿತ ಪರಮಾತ್ಮನೇ ನಿಮಗೆ ಜ್ಞಾನ ನೀಡುತ್ತಿದ್ದಾರೆ. ನೀವು ಜ್ಞಾನ ಗಂಗೆಯರಾಗಿದ್ದೀರಿ. ದೇವತೆಗಳಲ್ಲಿ ಈ ಜ್ಞಾನ ಇರುವುದಿಲ್ಲ. ತ್ರಿಕಾಲದರ್ಶಿಯ ಜ್ಞಾನ ಬ್ರಾಹ್ಮಣರಲ್ಲಿ ಮಾತ್ರ ಇದೆ. ನೀವು ಈ ಸಮಯದಲ್ಲಿ ಜ್ಞಾನವನ್ನು ಕಲಿತು ಆಸ್ತಿಯನ್ನು ಪಡೆದುಕೊಳ್ಳುತ್ತೀರಿ. ರಾಜಯೋಗವನ್ನು ಕಲಿತು ಸ್ವರ್ಗದ ರಾಜಾ-ರಾಣಿ ಆಗುವಿರಿ.

ನಾವೀಗ ತಂದೆಯ ಮೂಲಕ ಮೃತ್ಯುವಿನ ಮೇಲೆ ವಿಜಯಿಗಳಾಗುತ್ತೇವೆಂದು ತಿಳಿದುಕೊಂಡಿದ್ದೀರಿ. ಸತ್ಯಯುಗದಲ್ಲಿ ನಾವು ಹಳೆಯ ಶರೀರ ಬಿಡುವಾಗ ಹೊಸ ಶರೀರವನ್ನು ಪಡೆದು ಚಿಕ್ಕ ಮಗುವಾಗಿ ಜನ್ಮ ಪಡೆಯುತ್ತೇವೆಂಬ ನಿಮಗೆ ಸಾಕ್ಷಾತ್ಕಾರವಾಗುತ್ತದೆ. ಸರ್ಪದ ಉದಾಹರಣೆ ನಮ್ಮದಾಗಿದೆ..... ಇದೇ ಭಾರತ ಮೊದಲು ಶಿವಾಲಯವಾಗಿದ್ದು ಚೈತನ್ಯ ದೇವೀ-ದೇವತೆಗಳ ರಾಜ್ಯವಿತ್ತು. ಈಗ ಮಾಡಲ್ಪಟ್ಟಿರುವ ಮಂದಿರಗಳು ಆ ದೇವೀ-ದೇವತೆಗಳ ಮಂದಿರಗಳಾಗಿವೆ. ಶಿವ ತಂದೆ ಬಂದು ಶಿವಾಲಯವನ್ನಾಗಿ ಮಾಡುತ್ತಾರೆ, ನಂತರ ರಾವಣ ವೇಶ್ಯಾಲಯವನ್ನಾಗಿ ಮಾಡುತ್ತಾನೆ. ರಾವಣನೆಂದರೆ ಯಾರು? ಎಂದು ದೊಡ್ಡ-ದೊಡ್ಡ ವಿದ್ವಾನ್ ಪಂಡಿತರು ತಿಳಿದುಕೊಂಡಿಲ್ಲ. ರಾವಣನ ರಾಜ್ಯ ಅರ್ಧಕಲ್ಪ ನಡೆಯುತ್ತದೆ. ದೆಹಲಿಯಲ್ಲಿ ಮೊದಲು ದೇವೀ-ದೇವತೆಗಳ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು. ಇದನ್ನೇ ಕ್ರೈಸ್ತ ಧರ್ಮದಲ್ಲಿ ಕ್ರೈಸ್ತನ 3000 ವರ್ಷದ ಮೊದಲು ಭಾರತ ಸ್ವರ್ಗವಾಗಿತ್ತೆಂದು ಹೇಳುತ್ತಾರೆ. ಭಾರತ ಸ್ವರ್ಗವಿದ್ದಾಗ ಸ್ವರ್ಗದಲ್ಲಿಯೇ ಪುನರ್ಜನ್ಮವಾಗುತ್ತಿತ್ತು. ಈಗ ನರಕ ವಿರುವ ಕಾರಣ ನರಕದಲ್ಲಿಯೇ ಪುನರ್ಜನ್ಮ ಪಡೆಯಬೇಕಾಗುತ್ತದೆ. ಮಕ್ಕಳೇ ಕಲ್ಪ-ಕಲ್ಪವೂ ನಾನು ಬಂದು ನಿಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತೇನೆಂದು ನಿಮಗೆ ನೆನಪಿದೆಯಲ್ಲವೆ ಎಂದು ತಂದೆಯು ಕೇಳುತ್ತಾರೆ. ನೀವೀಗ ಪತಿತರಿಂದ ಪಾವನರಾಗುತ್ತಿದ್ದೀರಿ. ಪಾವನರನ್ನಾಗಿ ಮಾಡುವುದು ತಂದೆಯ ಕರ್ತವ್ಯವಾಗಿದೆ. ಮಕ್ಕಳ ಬುದ್ಧಿಯಲ್ಲಿದೆ-ಶ್ರೇಷ್ಠಾತಿ ಶ್ರೇಷ್ಠ ಶಿವ ತಂದೆ ಈ ಬ್ರಹ್ಮಾರವರ ಮೂಲಕ ಕುಳಿತು ಸರ್ವ ವೇದ ಶಾಸ್ತ್ರಗಳ ಸಾರವನ್ನು ತಿಳಿಸುತ್ತಿದ್ದಾರೆ. ಭಕ್ತಿ ಮಾರ್ಗದಲ್ಲಿ ಮನುಷ್ಯರು ಭಕ್ತಿಗಾಗಿ ಖರ್ಚು ಮಾಡುತ್ತಾ-ಮಾಡುತ್ತಾ ಕವಡೆ ಸಮಾನ ಆಗಿ ಬಿಟ್ಟಿದ್ದಾರೆ. ನಾನು ನಿಮಗೆ ವಜ್ರ ವೈಡೂರ್ಯಗಳ ಅರಮನೆ ಮಾಡಿ ಕೊಟ್ಟಿದ್ದೆನು, ನೀವು ಪುನಃ ಕೆಳಗಡೆ ಇಳಿಯ ಬೇಕಾಯಿತೆಂದು ತಂದೆ ತಿಳಿಸುತ್ತಿದ್ದಾರೆ. ಕಲೆ ಕಡಿಮೆ ಆಗಲೇಬೇಕು. ಅದು ಇಳಿಯುವ ಸಮಯವಾಗಿದ್ದು ಆಗ ಯಾರೂ ಮೇಲೆ ಏರಲು ಸಾಧ್ಯವಿಲ್ಲ. ಈ ಸಮಯದಲ್ಲಿ ನೀವು ಎಲ್ಲರಿಗಿಂತಲೂ ಸರ್ವ ಶ್ರೇಷ್ಠ ಈಶ್ವರನ ಸಂತಾನರಾಗಿದ್ದೀರಿ. ನಂತರ ದೇವತಾ, ಕ್ಷತ್ರಿಯ..........ಆಗಲೇ ಬೇಕಾಗುತ್ತದೆ. ಭಕ್ತಿಮಾರ್ಗದಲ್ಲಿ ಯಾರು ಎಷ್ಟೇ ದಾನ-ಪುಣ್ಯ ಮಾಡಿದರೂ ಖರ್ಚು ಮಾಡುತ್ತಾ ಇಳಿಯಲೇ ಬೇಕಾಗುತ್ತದೆ. ತಂದೆಯು ಮಕ್ಕಳನ್ನು ಕೇಳುತ್ತಿದ್ದಾರೆ ನಾನು ನಿಮ್ಮನ್ನು ತುಂಬಾ ಶ್ರೀಮಂತರನ್ನಾಗಿ ಮಾಡಿದ್ದೆ, ನೀವು ಆ ಎಲ್ಲಾ ಸಂಪತ್ತನ್ನು ಏನು ಮಾಡಿದಿರಿ? ಬಾಬಾ ನಿಮ್ಮ ಮಂದಿರಗಳನ್ನು ಮಾಡಿಸಿ ಖರ್ಚು ಮಾಡಿದೆವೆಂದು ಮಕ್ಕಳು ತಿಳಿಸುತ್ತಾರೆ. ಈಗ ಮತ್ತೆ ಶಿವಭೋಲಾನಾಥ ತಂದೆ 21 ಜನ್ಮಗಳಿಗೆ ನಮ್ಮ ಜೋಳಿಗೆಯನ್ನು ತುಂಬುತ್ತಿದ್ದಾರೆ. ನಾನು ನಿಮ್ಮ ವಿಧೇಯ ಸೇವಕನಾಗಿದ್ದೇನೆ..... ವಿಧೇಯತಂದೆ, ಶಿಕ್ಷಕನಾಗಿದ್ದೇನೆ ( ಐ ಯಾಂ ಯುವರ್

ಒಬೀಡಿಯಂಟ್ ಸರ್ವಂಟ್, ಫಾದರ್, ಟೀಚರ್). ಪಾರಲೌಕಿಕ ತಂದೆ, ಪಾರಲೌಕಿಕ ಶಿಕ್ಷಕ ಹಾಗು ಪರಲೋಕದಲ್ಲಿರುವಂತಹ ಅತೀ ವಿಧೇಯಕ ಸದ್ಗುರು ಆಗಿದ್ದೇನೆ. ನಾನು ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ ವಿನಃ ಬೇರೆಯಾರೂ ಸಹ ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದಿಲ್ಲ. ಇಲ್ಲಿ ಭಯ ಪಡುವ ಮಾತೇನಿಲ್ಲ ಏಕೆಂದರೆ ಈಗ ನೀವು ಮಕ್ಕಳಿಗೆ ತಂದೆಯಿಂದ ಜ್ಞಾನದ ಮೂರನೆಯ ನೇತ್ರ ಪ್ರಾಪ್ತಿಆಗಿದೆ. ಈ ನೇತ್ರಗಳಿಂದ ನೀವು ತಂದೆಯನ್ನು ನೋಡುತ್ತೀರಿ, ಶಿವ ತಂದೆಯನ್ನು ಬುದ್ಧಿಯ ನೇತ್ರದಿಂದ ತಿಳಿದುಕೊಳ್ಳಬಹುದಾಗಿದೆ. ಮಕ್ಕಳಿಗೂ ಶಿವ ತಂದೆಯಿಂದಲೇ ಆಸ್ತಿ ಸಿಗುತ್ತದೆ. ಶ್ರೇಷ್ಠಾತಿ ಶ್ರೇಷ್ಠ ಶಿವ ತಂದೆಯಾಗಿದ್ದು ನಂತರ ಬ್ರಹ್ಮಾ, ವಿಷ್ಣು, ಶಂಕರ ಮತ್ತೆ ಜಗದಂಬಾ, ಬ್ರಹ್ಮಾ ಹಾಗೂ ಲಕ್ಷ್ಮೀ-ನಾರಾಯಣರಾಗಿದ್ದಾರೆ. ಆದರೆ ಎಷ್ಟೊಂದು ಚಿತ್ರಗಳನ್ನು ಮಾಡಿ ಬಿಟ್ಟಿದ್ದಾರೆ. ಆರು-ಎಂಟು ಭುಜಗಳಿರುವವರು ಯಾರೂ ಇರುವುದಿಲ್ಲ. ಇದೆಲ್ಲವೂ ಭಕ್ತಿ ಮಾರ್ಗದ ಆಟವಾಗಿದೆ. ಹಣ, ಸಮಯ, ಶಕ್ತಿ ಎಲ್ಲವೂ ವ್ಯರ್ಥವಾಗುತ್ತದೆ. ವಾಸ್ತವದಲ್ಲಿ ಸರ್ವ ಶಾಸ್ತ್ರಮಯೀ ಶಿರೋಮಣಿ ಗೀತೆಯಾಗಿದೆ. ಆ ಗೀತೆಯಲ್ಲೂ ಸಹ ತಂದೆಗೆ ಬದಲು ಮಗನ ಹೆಸರನ್ನು ಹಾಕಿ ನಂಬರ್ವನ್ ತಪ್ಪು ಮಾಡಿ ಬಿಟ್ಟಿದ್ದಾರೆ. ಈ ತಪ್ಪು ಮಾಡುವುದೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ಸರ್ವರ ಸದ್ಗತಿದಾತ ಪತಿತ ಪಾವನ ತಂದೆ ಒಬ್ಬರೇ ಆಗಿದ್ದಾರೆ, ಮತ್ತೊಬ್ಬರು ಪ್ರಜಾಪಿತ ಬ್ರಹ್ಮಾ, ಮೂರನೆಯವರು ಲೌಕಿಕ ತಂದೆ ಆಗಿದ್ದಾರೆ. ಜನ್ಮ-ಜನ್ಮದಲ್ಲಿ ಇಬ್ಬರು ತಂದೆಯರು ಸಿಗುತ್ತಾರೆ. ಈ ಸಂಗಮಯುಗದಲ್ಲಿ ಮಾತ್ರ ಮೂರು ಜನ ತಂದೆಯರು ಸಿಗುತ್ತಾರೆ. ಇಲ್ಲಿ ತಬ್ಬಿಬ್ಬಾಗುವ ಮಾತೇನಿಲ್ಲ. ಜ್ಞಾನ ಭಕ್ತಿ ವೈರಾಗ್ಯವೆಂದು ಹೇಳುತ್ತಾರೆ. ವೈರಾಗ್ಯ ಎರಡು ಪ್ರಕಾರದಲ್ಲಿದೆ. ಒಂದು ಹದ್ದಿನ ವೈರಾಗ್ಯ, ಎರಡನೆಯದು ಬೇಹದ್ದಿನ ವೈರಾಗ್ಯ. ಸನ್ಯಾಸಿಗಳಂತು ಮನೆ-ಮಠವನ್ನು ಬಿಟ್ಟು ಕಾಡಿಗೆ ಹೊರಟು ಹೋಗುತ್ತಾರೆ. ಇಲ್ಲಿ ನೀವು ಮಕ್ಕಳು ಹಳೆಯ ಪ್ರಪಂಚವನ್ನೇ ಬುದ್ಧಿಯಿಂದ ಮರೆಯುತ್ತೀರಿ. ಅದು ಹಠಯೋಗ, ಇದು ರಾಜಯೋಗವಾಗಿದೆ. ರಾಜಯೋಗವನ್ನು ಹಠಯೋಗಿಗಳೆಂದೂ ಕಲಿಸಿ ಕೊಡುವುದಿಲ್ಲ. ಇವು ಬಹಳ ತಿಳಿದುಕೊಳ್ಳುವ ಮಾತಾಗಿದೆ. ನೀವು ಮಕ್ಕಳು ಈ ಸಮಯದಲ್ಲಿ ಮುಳ್ಳುಗಳಿಂದ ಹೂಗಳು ಆಗುತ್ತೀರಿ. ದೇಹಾಭಿಮಾನದ ಮುಳ್ಳು ಮೊದಲನೆ ಸ್ಥಾನದ ಮುಳ್ಳು ಆಗಿದೆ. ದೇಹಾಭಿಮಾನವನ್ನು ಬಿಡಿಸಲು ತಂದೆಯ ವಿನಃ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈ ಹಳೆಯ ಪ್ರಪಂಚವನ್ನು ಬುದ್ಧಿಯಿಂದ ಮರೆತು ಬೇಹದ್ದಿನ ವೈರಾಗಿಗಳಾಗಬೇಕು. ದೇಹಾಭಿಮಾನದ ಭೂತವನ್ನು ತೆಗೆಯಬೇಕು.

2. ತಂದೆಯ ಸಮಾನ ವಿಧೇಯರಾಗಿ ಸೇವೆ ಮಾಡಬೇಕು. ತಮ್ಮ ಸಮಾನರನ್ನಾಗಿ ಮಾಡಬೇಕು. ಯಾವ ಮಾತಿನಲ್ಲೂ ತಬ್ಬಿಬ್ಬಾಗಬಾರದು.

ವರದಾನ: ಪರಮಾತ್ಮನ ಪ್ರೀತಿಯ ಆಧಾರದ ಮೇಲೆ ದುಃಖದ ಪ್ರಪಂಚವನ್ನು ಮರೆಯುವಂತಹ ಸುಖ-ಶಾಂತಿ ಸಂಪನ್ನ ಭವ.

ಪರಮಾತ್ಮನ ಪ್ರೀತಿಯು ಅಂತಹ ಸುಖ ಕೊಡುವಂತದ್ದು, ಅದರಲ್ಲಾನಾದರೂ ಮುಳಿಗಿ ಬಿಟ್ಟರೆ ಈ ದುಃಖದ ಪ್ರಪಂಚವೇ ಮರೆತು ಹೋಗುತ್ತದೆ.ಈ ಜೀವನದಲ್ಲಿ ಏನು ಬೇಕೋ ಆ ಎಲ್ಲಾ ಸರ್ವ ಕಾಮನೆಗಳೂ ಪೂರ್ಣವಾಗಿ ಬಿಡುವುದು - ಇದೇ ಪರಮಾತ್ಮನ ಪ್ರೀತಿಯ ಸಂಕೇತವಾಗಿದೆ. ತಂದೆಯು ಸುಖ-ಶಾಂತಿಯನ್ನೇನು, ಅದರ ಭಂಡಾರವನ್ನಾಗಿಯೇ ಮಾಡಿ ಬಿಡುತ್ತಾರೆ. ತಂದೆಯು ಯಾವರೀತಿ ಸುಖದ ಸಾಗರನಾಗಿದ್ದಾರೆ, ನದಿ ಅಥವ ಬಾವಿಯಲ್ಲ. ಹಾಗೆಯೇ ಮಕ್ಕಳನ್ನೂ ಇದೇ ರೀತಿ ಸುಖದ ಭಂಡಾರದ ಮಾಲೀಕರನ್ನಾಗಿ ಮಾಡಿ ಬಿಡುತ್ತಾರೆ. ಆದ್ದರಿಂದ ಬೇಡುವ ಅವಶ್ಯಕತೆಯಿಲ್ಲ. ಅದಕ್ಕಾಗಿ ಕೇವಲ ಸಿಕ್ಕಿರುವ ಖಜಾನೆಗಳನ್ನು ವಿಧಿಪೂರ್ವಕವಾಗಿ ಸಮಯದನುಸಾರ ಕಾರ್ಯದಲ್ಲಿ ಉಪಯೋಗಿಸಿರಿ.

ಸ್ಲೋಗನ್: ತಮ್ಮ ಸರ್ವ ಜವಾಬ್ದಾರಿಗಳ ಹೊರೆಯನ್ನು ತಂದೆಗೆ ಅರ್ಪಣೆ ಮಾಡಿ ಡಬಲ್ ಲೈಟ್ ಆಗಿರಿ.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ:

``ನಿರಾಕಾರ ಪರಮಾತ್ಮನು ತನ್ನ ಸಾಕಾರ ಬ್ರಹ್ಮಾರವರ ತನುವಿನಲ್ಲಿ ಪ್ರವೇಶವಾಗುವ ವಿಚಿತ್ರ ಯುಕ್ತಿ"

ಪರಮಾತ್ಮನು ತನ್ನ ಈ ಯುಕ್ತಿಯನ್ನು ರಚಿಸಿದ್ದಾರೆ ಅಂದರೆ ತನ್ನ ಸಾಕಾರ ತನುವನ್ನು ನೊಂದಣಿ ಮಾಡಿದ್ದಾರೆ. ಅದೇ ಪ್ರಕೃತಿಯ ಆಧಾರವನ್ನು ತೆಗೆದುಕೊಂಡು ಬರುತ್ತಾರೆ. ಇಲ್ಲದಿದ್ದರೆ ನಾವು ಸಾಕಾರ ಮನುಷ್ಯಾತ್ಮರು, ನಿರಾಕಾರನ ಮಡಿಲಿನಲ್ಲಿ ಹೇಗೆ ಕುಳಿತುಕೊಳ್ಳಲು ಸಾಧ್ಯ! ಆದ್ದರಿಂದ ಪರಮಾತ್ಮನು ಹೇಳುತ್ತಾರೆ - ಸಾಕಾರ ರೂಪದಲ್ಲಿ ಬಂದು, ನೀವು ನನ್ನನ್ನು ಮಡಿಲಿನಲ್ಲಿ ತೆಗೆದುಕೊಳ್ಳಿರಿ, ಇದರಲ್ಲಿ ಕೊಡುವ ಯಾವುದೇ ಮಾತಿಲ್ಲ. ಕೇವಲ ಯಾವುದು ನಿಮ್ಮನ್ನು ದುಃಖಿ ಅಶಾಂತರನ್ನಾಗಿ ಮಾಡಿವೆಯೋ ಆ 5 ವಿಕಾರಗಳ ಸನ್ಯಾಸ ಮಾಡಿ, ಮತ್ತು ಪರಮಾತ್ಮನಾದ ನನ್ನನ್ನು ನಿರಂತರ ನೆನಪು ಮಾಡಿರಿ. ಮನಸಾ-ವಾಚಾ-ಕರ್ಮಣಾದಿಂದ ನನ್ನ ನಿರ್ದೇಶದನುಸಾರ ನಡೆಯುತ್ತೀರೆಂದರೆ, ನಾನು ನಿಮ್ಮ ಪಾಪಗಳನ್ನು ಭಸ್ಮಗೊಳಿಸುವೆನು ಹಾಗೂ ಪರಮಧಾಮಕ್ಕೆ ಕರೆದುಕೊಂಡು ಹೊರಡುವೆನು. ಇದು ನಾವಾತ್ಮರೊಂದಿಗೆ ಪರಮಾತ್ಮನ ಪ್ರತಿಜ್ಞೆಯಾಗಿದೆ. ಈಗ ಅವರ ಆದೇಶವನ್ನು ಅನುಸರಿಸಬೇಕು, ಕೇವಲ ತಂದೆ-ತಾಯಿಯೆಂದು ಹೇಳುವಷ್ಟೇ ಆಗಬಾರದು, ಆದರೆ ಸಂಪೂರ್ಣವಾಗುವುದರಿಂದ ಸಂಪೂರ್ಣ ಪ್ರಾಪ್ತಿಯಾಗುವುದು. ಸ್ವಲ್ಪ ಸಂಬಂಧವನ್ನು ಜೋಡಿಸುತ್ತೀರೆಂದರೆ ಸ್ವಲ್ಪವೇ ಸಿಗುವುದು. ಈಗ ತಂದೆಯ ವ್ಯಾಪಾರವೇನಿದೆಯೋ ಅದೇ ಮಕ್ಕಳ ವ್ಯಾಪಾರವಾಗಿದೆ. ಇಲ್ಲಿ ವಿಚ್ಛೇದನದ ಮಾತೇ ಇಲ್ಲ, ಇಲ್ಲಂತು ಆ ಆಸ್ತಿಯನ್ನು 21 ಪೀಳಿಗೆಗಳವರೆಗೆ ಅನುಭವಿಸಬೇಕಾಗಿದೆ. ಈಗ ಇಷ್ಟನ್ನು ತಿಳಿಯಬೇಕು - ಇದಕ್ಕಿಂತಹ ಹೆಚ್ಚಿನ ಅಧಿಕಾರವು ಮತ್ತ್ಯಾವುದೂ ಇಲ್ಲ. ಆದ್ದರಿಂದಲೇ ಹೇಳುತ್ತೇನೆ - ನಾನು ಯಾರು, ಹೇಗಿದ್ದೇನೆಯೋ ಅದೇ ರೂಪದಲ್ಲಿ ನನ್ನನ್ನು ನೆನಪು ಮಾಡಿರಿ. ಈಗ ಬಾಬಾರವರು ತನ್ನ ಕರ್ತವ್ಯ ಪರಿ ಪಾಲನೆ ಮಾಡಿದ್ದಾರೆ ಮತ್ತು ಮಕ್ಕಳು ತಮ್ಮ ಕರ್ತವ್ಯ ಪರಿಪಾಲನೆ ಮಾಡಬೇಕಾಗಿದೆ. ಈ ವಿಕಾರಿ ಏಕತೆ ಅರ್ಥಾತ್ ವಿಕಾರಿ ಕುಲದ ಲೋಕ ಮರ್ಯಾದೆಗಳಂತು ಜನ್ಮ-ಜನ್ಮಾಂತರದಿಂದ ಪಾಲಿಸುತ್ತಾ ಬಂದಿದ್ದೀರಿ, ಅದರಿಂದಂತು ಇನ್ನೂ ಕರ್ಮಬಂಧನವಾಯಿತು. ಈಗಂತು ಪಾರಲೌಕಿಕ ಮರ್ಯಾದೆ ಅರ್ಥಾತ್ ಪರಮಾತ್ಮನ ಜೊತೆ ಅಲೌಕಿಕ ಕಾರ್ಯದಲ್ಲಿ ಸಹಯೋಗಿಗಳಾಗಿರಿ. ನಮ್ಮ ಸಂಬಂಧವೀಗ ಸರ್ವಶ್ರೇಷ್ಠನೊಂದಿಗೆ ಇದೆ.ನಾವು ಅಂತಹವರ ಸಂತಾನರಾಗಿದ್ದೇವೆ, ಅವರು ಬಂದು ಸಾಕಾರ ತನುವಿನ ಮೂಲಕ ನಮಗೆ ಜ್ಞಾನವನ್ನು ಕೊಡುತ್ತಿದ್ದಾರೆ, ಅಂದಮೇಲೆ ಗೌರವಾನ್ವಿತವಾಗಿ ತೇರ್ಗಡೆ ಆಗಬಾರದೇ! ಪ್ರತಿಯೊಬ್ಬರದೂ ಪುರುಷಾರ್ಥದಿಂದ ತಿಳಿದು ಬರುತ್ತದೆ - ಇವರು ಬುದ್ಧಿವಂತರೇ ಅಥವಾ ಇಲ್ಲವೇ? ಎಂದು. ಒಂದುವೇಳೆ ಯಾರೇ ಪರಮಾತ್ಮನ ಮಡಿಲನ್ನು ಪಡೆದು, ನಾವು ಅವರ ಮಕ್ಕಳು ವಾರಸುಧಾರರೆಂದು ಹೇಳಿದ ನಂತರ ವಿಚ್ಛೇದನ ಕೊಟ್ಟು ಬಿಟ್ಟರೆ, ಅಂತಹ ಮಕ್ಕಳನ್ನು ಭಸ್ಮಾಸುರನೆಂದು ಹೇಳುವರಲ್ಲವೇ! ಏರಿದರೆ ಶ್ರೇಷ್ಠ ಪದವಿ, ಬಿದ್ದರೆ ಭಸ್ಮಾಸುರ ಆಗಿ ಬಿಡುತ್ತಾರೆ. ಈಗ ಇದನ್ನು ನೆನಪಿಟ್ಟುಕೊಳ್ಳಿರಿ, ನಮ್ಮ ಸಂಬಂಧವು ಯಾರೊಂದಿಗಿದೆ? ಯಾವ ಸಂಬಂಧದಲ್ಲಿ ಬರುವುದಕ್ಕಾಗಿ ಸ್ವಯಂ ದೇವತೆಗಳೂ ಇಚ್ಛೆಯನ್ನಿಡುವರು. ಒಳ್ಳೆಯದು. ಓಂ ಶಾಂತಿ.